**ಪ್ರಕಾಶ್ ಬೆಳವಾಡಿ ಅವರ ಮಗಳು ತೇಜು 'ಗಂಟು ಮೂಟೆ' ಚಿತ್ರದಿಂದ ನಾಯಕಿಯಾಗಿ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಮುಂದೆಯೂ ಒಳ್ಳೆಯ ಸಿನಿಮಾ ಸಿಕ್ಕರೆ ನಟನೆಯನ್ನು ಮುಂದುವರಿಸುವ ಇಚ್ಛೆ ಅವರಿಗಿದೆ.**

■ ಪದ್ಮನಾಭ ಭಟ್

# ತೇಜು ಗಂಟುಮೂಟೆ ಕಥೆ!



ಅವತ್ತು ಮಗಳು ತೇಜು ಬಂದು ಎದುರಿಗೆ ನಿಂತುಕೊಂಡು 'ನಾನೊಂದು ಸಿನಿಮಾದಲ್ಲಿ ನಟಿಸಲಿಕ್ಕೆ ಒಪ್ಪಿಕೊಂಡು ಬಂದಿದ್ದೇನೆ' ಎಂದು ಹೇಳಿದಾಗ ತಂದೆ ಪ್ರಕಾಶ್ ಬೆಳವಾಡಿ ಅವರ ಮುಖದಲ್ಲಿ ಅಸಮಾಧಾನದ ಗೆರೆಗಳು ಕಾಣಿಸಿಕೊಂಡಿದ್ದವು.

ಅವರು ಕೇಳಿದ ಮೊದಲ ಪ್ರಶ್ನೆ 'ನನಗೆ ಮುಜುಗರವಾಗುವಂಥ ದೃಶ್ಯಗಳೇನಾದರೂ ಸಿನಿಮಾದಲ್ಲಿ ಇವೆಯಾ?'. ಅಪ್ಪನ ಪ್ರಶ್ನೆಗೆ ತೇಜು ಕೂಡ ಅಷ್ಟೇ ನೇರವಾಗಿ ಉತ್ತರಿಸಿದ್ದರು, 'ನಿಮಗೆ ಮುಜುಗರ ಆಗತ್ತೋ ಇಲ್ವೋ ಗೊತ್ತಿಲ್ಲ. ಅಂಥ ಒಂದೆರಡು ದೃಶ್ಯಗಳಂತೂ ಇವೆ'. ಅವತ್ತು ರಾತ್ರಿ ಪ್ರಕಾಶ್ ನಿದ್ರೆ ಮಾಡಲಿಲ್ಲ. ಅಪ್ಪನ ಈ ಚಡಪಡಿಕೆಯ ಉರಿಯಿಂದ ತೇಜುವನ್ನು ತಪ್ಪಿಸಿದ್ದು ಅಮ್ಮನ ಬೆಂಬಲ. 'ನೀನು ಮೆಚ್ಚಿಕೊಂಡು ನಟಿಸಲಿಕ್ಕೆ ಒಪ್ಪಿಕೊಂಡಿದ್ದೀಯಾ ಎಂದ ಮೇಲೆ ಆ ಸಿನಿಮಾ ಚೆನ್ನಾಗಿಯೇ ಇರುತ್ತದೆ' ಎಂದು ಬೆಂಬಲಕ್ಕೆ ನಿಂತರು. ಮರುದಿನ ಬೆಳಿಗ್ಗೆ ತಂದೆಯೂ 'ನಿಂಗೆ ಇಷ್ಟ ಆಗಿದೆ ಅಂದ್ರೆ ಮಾಡು' ಎಂದು ಒಪ್ಪಿಗೆ ನೀಡಿದರು.

ರೂಪಾ ರಾವ್ ನಿರ್ದೇಶನದ 'ಗಂಟುಮೂಟೆ' ಸಿನಿಮಾವನ್ನು ಒಪ್ಪಿಕೊಂಡಾಗ ಮನೆಯಲ್ಲಿ ಸಿಕ್ಕ ಸ್ಪಂದನದ ಕುರಿತು ಹೇಳುವಾಗ ಆ ಕ್ಷಣದಲ್ಲಿ ಎದುರಿಸಿದ ತಳಮಳಕ್ಕಿಂತ ನಂತರ ಸಿಕ್ಕ ಮೆಚ್ಚುಗೆಯ ಸಾರ್ಥಕತೆಯೇ ಹೆಚ್ಚು ಇಣುಕುತ್ತದೆ.

ಇದೇನೂ ತೇಜು ಅವರ ಮೊದಲ ಸಿನಿಮಾ ಅಲ್ಲ. ಈ ಮೊದಲು ಪ್ರಕಾಶ್ ರೈ ನಿರ್ದೇಶನದ 'ಇದೊಳ್ಳೆ ರಾಮಾಯಣ' ಸಿನಿಮಾದಲ್ಲಿಯೂ ಅವರು ನಟಿಸಿದ್ದರು. 'ಆದರೆ ಆ ಸಿನಿಮಾದಲ್ಲಿ ನಮ್ಮ ಕುಟುಂಬದ ನಟರೇ ಸಾಕಷ್ಟು ಜನ ಇದ್ದರು. ಹಾಗಾಗಿ ಅದೇನೂ ವಿಶೇಷ ಅನಿಸಿರಲಿಲ್ಲ' ಎಂದು ನೆನಪಿಸಿಕೊಳ್ಳುತ್ತಾರೆ.

ನಿರ್ದೇಶಕಿ ರೂಪಾ ರಾವ್ ಅವರು ತೇಜುವನ್ನು ನೋಡಿದ್ದು ರಂಗಭೂಮಿಯ ಮೇಲೆ ನಾಟಕವೊಂದರ ಪಾತ್ರವಾಗಿ. ಆ ನಾಟಕದಲ್ಲಿ ಅವರು ಸುಮಾರು ಮೂವತ್ತೈದರಿಂದ ನಲ್ವತ್ತು ವರ್ಷದ ಹೆಂಗಸಿನ ಪಾತ್ರದಲ್ಲಿ ನಟಿಸಿದ್ದರು. ಅದನ್ನು ಮೆಚ್ಚಿಕೊಂಡೇ ರೂಪಾ ರಾವ್ ಆಡಿಷನ್‌ಗೆ ಕರೆಸಿಕೊಂಡಿದ್ದು.

'ಈಗಿನ ಸಿನಿಮಾ ನಾಯಕಿಯರಿಗೆ ಇರಬೇಕಾದ ಯಾವ ಲಕ್ಷಣಗಳೂ ನನ್ನಲ್ಲಿ ಇರಲಿಲ್ಲ. ನನ್ನನ್ನು ಕರೆದು ಯಾವ ರೀತಿ ಪಾತ್ರ ಕೊಡುತ್ತಾರೆ ಎಂಬ ಕುತೂಹಲ ಇತ್ತು. ಆದರೆ ಕಥೆ ಕೇಳಿದಾಗ ತುಂಬ ಖುಷಿಯಾಯ್ತು. ನನ್ನದೇ ಶಾಲಾದಿನಗಳಿಗೆ ಮರಳಿ ಹೋದ ಅನುಭವ ಆಯ್ತು. ಸಾಮಾನ್ಯವಾಗಿ ನಾನು ಯಾವ ವಿಷಯವನ್ನು ಮನೆಯಲ್ಲಿ ಹೇಳಿ, ಅಪ್ಪ–ಅಮ್ಮನ ಜೊತೆ ಚರ್ಚಿಸದೆ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಆದರೆ ಈ ಸಲ ಮಾತ್ರ ಮನೆಯಲ್ಲಿ ಹೇಳದೆಯೇ ಆಡಿಷನ್‌ಗೆ ಹೋಗಿದ್ದೆ. ಯಾಕೆಂದರೆ ಅಪ್ಪನಿಗೂ ನಾನು ಸಿನಿಮಾಗಳಲ್ಲಿ ನಟಿಸುವುದು ಇಷ್ಟವಿರಲಿಲ್ಲ. ಕನ್ನಡ ಚಿತ್ರಗಳಲ್ಲಿ ನಾಯಕಿಯರಿಗೆ ಅಂಥ ಮುಖ್ಯ ಪಾತ್ರ ಇರುವುದಿಲ್ಲ ಎನ್ನುವುದು ಅವರ ಅನಿಸಿಕೆ. ಆದರೆ ನಾನು ಮಾತ್ರ ಈ ಸಿನಿಮಾದ ಕಥೆ ಕೇಳಿ ಮನೆಯಲ್ಲಿ ಕೇಳದೆಯೇ ಒಪ್ಪಿಕೊಂಡು ಬಂದುಬಿಟ್ಟೆ' ಎಂದು 'ಗಂಟು ಮೂಟೆ'ಯ ಜೊತೆಗೆ ತಮ್ಮ ನಂಟು ಬೆಳೆದ ಪರಿಯನ್ನು ಅವರು ವಿವರಿಸುತ್ತಾರೆ.

ತೇಜು ನೀನಾಸಮ್ ರಂಗಶಿಕ್ಷಣ ಕೇಂದ್ರದಲ್ಲಿ ಒಂದು ವರ್ಷದ ನಟನೆಯ ತರಬೇತಿ ಪಡೆದಿದ್ದಾರೆ. ಹಾಗೆಯೇ 'ತಿರುಗಾಟ'ದ ಕಲಾವಿದೆಯಾಗಿಯೂ ಒಂದು ವರ್ಷ ರಾಜ್ಯದ ಹಲವೆಡೆ ನಾಟಕ ಪ್ರದರ್ಶನ ನೀಡಿದ್ದಾರೆ. ಆದರೆ ಸಿನಿಮಾ ನಟನೆಯಲ್ಲಿ ಮಾತ್ರ ನೀನಾಸಮ್ ತರಬೇತಿಗಿಂತ ಹೆಚ್ಚು ನೆರವಾಗಿದ್ದು ಅಜ್ಜಿ ಭಾರ್ಗವಿ ನಾರಾಯಣ ಅವರ ನಟನೆ ಮತ್ತು ತಂದೆ ಪ್ರಕಾಶ್ ಬೆಳವಾಡಿ ಅವರ ನಿರ್ದೇಶನವನ್ನು ಹತ್ತಿರದಿಂದ ನೋಡಿದ ಅನುಭವವಂತೆ.

'ನೀನಾಸಮ್‌ನಲ್ಲಿ ಕಳೆದ ದಿನಗಳು ಬರೀ ನಟಿಯಾಗಿಯಷ್ಟೇ ಅಲ್ಲ, ನನ್ನ ಬದುಕಿನಲ್ಲಿಯೇ ಬಹುಮುಖ್ಯ ದಿನಗಳು. ಅಲ್ಲಿ ಸಾಕಷ್ಟು ಕಲಿತಿದ್ದೇನೆ. ಆದರೆ ಸಿನಿಮಾಗೆ ಬೇರೆಯದೇ ರೀತಿಯ ನಟನಾಕೌಶಲ ಬೇಕಾಗುತ್ತದೆ. ಅದು ನನ್ನ ಅಜ್ಜಿ ಮತ್ತು ತಂದೆಯಿಂದ ಕಲಿತಿದ್ದೇನೆ' ಎನ್ನುವ ಅವರಿಗೆ ಮುಂದೆ ಸಿನಿಮಾ ನಟಿಯಾಗಿ ಬೆಳೆಯಬೇಕು ಎಂಬ ಹಟವೇನೂ ಇಲ್ಲ.

'ಗಂಟು ಮೂಟೆಯಂಥ ಸ್ಕ್ರಿಪ್ಟ್‌ಗಳು ಮತ್ತೆ ನನಗೆ ಸಿಗುತ್ತವೆ ಎಂಬ ನಂಬಿಕೆ ಇಲ್ಲ. ಹಾಗೊಮ್ಮೆ ಅಷ್ಟು ಒಳ್ಳೆಯ ಸ್ಕ್ರಿಪ್ಟ್‌ಗಳು ಸಿಕ್ಕರೆ ಖಂಡಿತ ನಟಿಸುತ್ತೇನೆ' ಎನ್ನುವ ಅವರು ರಂಗಭೂಮಿಯೇ ನನ್ನ ಪ್ಯಾಷನ್, ಅದು ನನ್ನ ಜೀವ' ಎಂದು ಸ್ಪಷ್ಟವಾಗಿ ಹೇಳುತ್ತಾರೆ. ■